ಅ) ಈ ಪೈಕಿ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಜನಾಂಗದವರಿಗೆ ಮನೆ ದುರಸ್ತಿಗೆ ನೀಡಿದ ಮೊತ್ತವೆಷ್ಟು ಹಾಗೂ ದುರಸ್ತಿಯಾದ ಮನೆಗಳ ಸಂಖ್ಯೆ ಎಷ್ಟು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ವಸತಿ ಹಾಗೂ ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಹುಡ್ಕೋ ನೆರವಿನ ಜನತಾ ವಸತಿ ಯೋಜನೆಯಲ್ಲಿ ಮನೆ ದುರಸ್ತಿ ಕಾರ್ಯಗಳಿಗೆ ಹಣ ಸಹಾಯದ ಯೋಜನೆಯಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ವಾಹನಗಳಿಗೆ ಪರವಾನಿಗೆ ಕೊಡುವ ಬಗ್ಗೆ.

೧೬೮೧. ಶ್ರೀ ರಮಾನಾಥ ರೈ (ಬಂಟವಾಳ).— ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆ ಯಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ವಾಹನಗಳಿಗೆ ಪರವಾನಿಗೆ ಕೊಡುವುದನ್ನು ತಡೆಹಿಡಿಯಲಾಗಿದೆ ?

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸದರಿ ಪರವಾನಿಗೆ ಕೊಡುವುದನ್ನು ತಡೆಹಿಡಿಯದಿರಲು ಕಾರಣವೇನು ?

ಇ) ಸ್ವಯಂ ಉದ್ಯೋಗಿ ಚಾಲಕ ಮಾಲೀಕರಿಗೆ ಸದರಿ ಪರವಾನಿಗೆ ತಡೆಹಿಡಿಯುವಿಕೆಯಿಂದಾಗಿ ಜೀವನ ನಿರ್ವಹಣೆಗೆ ತೊಂದರೆ ಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಈ ತೊಂದರೆಯನ್ನು ಸರಿಪಡಿಸಲು ಸರ್ಕಾರದವರು ತುರ್ತು ಕ್ರಮ ಕೈಗೊಳ್ಳುವರೆ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಾರಿಗೆ ಮತ್ತು ರಾಜ್ಯ ಸಚಿವರು).—

ಅ) ಸರಕು ಸಾಗಣೆ ವಾಹನ ಮತ್ತು ಮಜಲು ವಾಹನಗಳಿಗೆ ಪರವಾನಿಗೆ ನೀಡುವಲ್ಲಿ ರಾಜ್ಯದ ಯಾವ ಜಿಲ್ಲೆಯಲ್ಲೂ ನಿರ್ಬಂದನೆ ವಿಧಿಸಿರುವುದಿಲ್ಲ. ೬+೧ ಆಸನ ಸಾಮರ್ಥ್ಯವುಳ್ಳ ಪ್ರವಾಸಿ ಟ್ಯಾಕ್ಸಿಗಳಿಗೆ ಪರವಾನಿಗೆ ನೀಡುವಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ನಿರ್ಬಂದನೆ ವಿಧಿಸಲಾಗುತ್ತಿದೆ. ಬೀದರ ಮತ್ತು ಬಿಜಾಪುರ ಜಿಲ್ಲೆಗಳನ್ನು ಬಿಟ್ಟು ಉಳಿದ ಎಲ್ಲಾ ಜಿಲ್ಲೆಗಳಲ್ಲಿ ೬ ಆಟೋರಿಕ್ಷಾ ಪರವಾನಿಗೆ ನೀಡುವುದನ್ನು ಸಹ ನಿರ್ಬಂಧಿಸಲಾಗುತ್ತಿದೆ. ದಕ್ಷಿಣ ಕನ್ನಡ, ಉತ್ತರ ಕನ್ನಡ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಪ್ರವಾಸಿ ಟ್ಯಾಕ್ಸಿಗಳಿಗೆ ಪರವಾನಿಗೆ ನೀಡುವಲ್ಲಿ ನಿರ್ಬಂಧನೆ ವಿಧಿಸಿದೆ ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಧಾರವಾಡ ಮತ್ತು ಮಂಡ್ಯಗಳು ೫+೧ ಆಸನ ಸಾಮರ್ಥ್ಯವುಳ್ಳ ಮೀಟರ್ ಟ್ಯಾಕ್ಸಿಗಳಿಗೆ ಪರವಾನಿಗೆ ನೀಡುವಲ್ಲಿ ನಿರ್ಬಂಧನೆ ವಿಧಿಸಿರುತ್ತವೆ.

ಆ) ದಕ್ಷಿಣ ಕನ್ನಡ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಪ್ರವಾಸಿ ಟ್ಯಾಕ್ಸಿಗಳಿಗೆ ಮತ್ತು ಆಟೋರಿಕ್ಷಾಗಳಿಗೆ ಪರವಾನಿಗೆ ನೀಡುವಲ್ಲಿ ನಿರ್ಬಂಧನೆ ವಿಧಿಸುತ್ತಿದೆ.

ಇ) ಬಂದಿದೆ.

ಈ) ಅವಶ್ಯಕತೆ ಮತ್ತು ಸಾರ್ವಜನಿಕ ಪ್ರಯಾಣಿಕರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಪರವಾನಿಗೆಗಳನ್ನು ನೀಡಲಾಗುತ್ತಿದೆಯೇ ಹೊರತು ಇತರ ಯಾವುದೇ ಅಭಿಪ್ರಾಯಗಳನ್ನಲ್ಲ. ಆದಿಗ್ಗೂ ಯಾವುದೇ ತರಹದ ವಾಹನಗಳಿಗೆ ಪರವಾನಿಗೆ ನೀಡುವಾಗ ನಿರುದ್ಯೋಗ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ಸಾಮಾನ್ಯವಾಗಿ ಮಾಲೀಕರೂ ಚಾಲಕರೂ ಆಗಿರುವ ಅರ್ಜಿದಾರರಿಗೆ ಪರವಾನಿಗೆ ನೀಡುವಲ್ಲಿ ಆದ್ಯತೆ ಕೊಡಲಾಗುತ್ತಿದೆ.